# ಅಮ್ಮನಿಗೆ ಪರೀಕ್ಷೆ!

ಮದುವೆಯ ನಂತರದ ಓದು ಗಂಡಿಗೆ ಸುಲಭ. ಅಮ್ಮನಾದ ನಂತರ ಓದೆನ್ನುವುದು ಹೆಣ್ಣಿಗೆ ಅಗ್ನಿಪರೀಕ್ಷೆ.

■ ಸ್ವಯಂಪ್ರಭಾ



ಓದುವುದಕ್ಕೆ ವಯಸ್ಸಿನ ಹಂಗಿಲ್ಲ ಎನ್ನುವುದು ನಿಜ. ಆದರೆ ಪುಟಾಣಿ ಮಕ್ಕಳನ್ನು ಮಡಿಲಿನಲ್ಲಿ ಹಾಕಿಕೊಂಡು ಪದವಿಗಳನ್ನು ಪಡೆಯುವುದು ಸರಳ ಮಾತಲ್ಲ. ಅಕ್ಷತಾಳಿಗೆ ತಾನು ಎಲ್.ಎಲ್.ಬಿ. ಓದಬೇಕು ಎಂಬ ಆಸೆಯಿದ್ದರೂ, ಅವಳು ಬಿ.ಎ. ಓದಿದ ಕೂಡಲೇ ಮದುವೆಯಾಗುವುದು ಅನಿವಾರ್ಯವಾಯಿತು. ಅದಾದ ಬಳಿಕ ಹನಿಮೂನು ಎಂಬುದಾಗಿ ಮತ್ತೊಂದು ವರ್ಷ ಓದುವುದು ಸಾಧ್ಯವಾಗಲಿಲ್ಲ. ಅದಾದ ಬಳಿಕ ಮಗುವಿನ ನಿರೀಕ್ಷೆಯಲ್ಲಿ ಎರಡು ಮೂರು ವರ್ಷಗಳು ಸಂದವು. ಆದರೆ ತನ್ನ ಮಗುವಿಗೆ ಮೂರು ವರ್ಷ ತುಂಬಿದ್ದೇ ಅವಳು, ಜಿದ್ದಿಗೆ ಬಿದ್ದವಳಂತೆ ಗುರಿ ಸಾಧನೆಗೆ ಮುಂದಾದಳು. ಕಾನೂನು ಕಾಲೇಜೊಂದರಲ್ಲಿ ಪ್ರವೇಶ ಪಡೆದಳು.

ಅದೊಂದು ಹೊಸದಾಗಿ ಆರಂಭವಾದ ಕಾನೂನು ಕಾಲೇಜು. ಹಾಗಾಗಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಿತ್ತು. ಬೋಧಕರು ವಿದ್ಯಾರ್ಥಿಗಳ ಅಗತ್ಯಗಳನ್ನು ಮನಗಂಡು ಹೊಂದಾಣಿಕೆ ಮಾಡಿಕೊಂಡು ಮಾರ್ಗದರ್ಶನ ಮಾಡುತ್ತಿದ್ದರು. ಈ ಪರಿಸ್ಥಿತಿಯನ್ನು ಸದುಪಯೋಗಪಡಿಸಿಕೊಂಡು ಅಕ್ಷತಾ ಓದು ಮುಂದುವರೆಸಿದಳು.

ಕುಟುಂಬದ ಕಾರಣದಿಂದಾಗಿ ಆಕೆ ತರಗತಿಗೆ ಅನೇಕ ಬಾರಿ ರಜೆ ಹಾಕುವುದು ಅನಿವಾರ್ಯವಾಗಿತ್ತು. ಪುಟ್ಟ ಮಗು ಹುಷಾರಿಲ್ಲದೇ ಇದ್ದಾಗ ಅಮ್ಮನ ಮಡಿಲನ್ನೇ ಬಯಸುವುದು ಸಹಜ. ಹಾಗಾಗಿ ತರಗತಿಗೆ ಮತ್ತೆ ಮತ್ತೆ ರಜೆ ಹಾಕಬೇಕಾಗಿತ್ತು. ಅಂತಹ ಸಂದರ್ಭಗಳಲ್ಲಿ ಬೋಧಕರು ಹಳೆಯ ಪಾಠಗಳನ್ನು ಅವಳಿಗೆ ಮತ್ತೊಮ್ಮೆ ವಿವರಿಸಿ ಹೇಳುತ್ತಿದ್ದರು. ಎಷ್ಟೋ ಬಾರಿ ಫೋನ್‌ನಲ್ಲಿಯೇ ಕ್ಲಿಷ್ಟ ಸಂದರ್ಭಗಳನ್ನು ವಿವರಿಸಿ, ಆಕೆಯ ಓದಿಗೆ ಒತ್ತಾಸೆಯಾಗಿ ನಿಂತಿದ್ದರು. ಒಟ್ಟಿನಲ್ಲಿ ಹಾಜರಾತಿಯ ಕೊರತೆ ಬಾರದಂತೆ ತರಗತಿಗಳಿಗೆ ಹೋಗಿ, ಪಾಠಗಳನ್ನು ಮನೆಯಲ್ಲಿಯೇ ಅಭ್ಯಾಸ ಮಾಡಿಕೊಂಡು, ಅಕ್ಷತಾ ಪರೀಕ್ಷೆಗೆ ಹಾಜರಾದಳು.

ಪೋಷಕ ಸ್ಥಾನಕ್ಕೆ ಬಡ್ತಿ ಪಡೆದ ಬಳಿಕ ವಿದ್ಯಾರ್ಥಿ ಜೀವನವನ್ನು ಪ್ರವೇಶಿಸುವವರು ವಿಭಿನ್ನವಾದ ಸವಾಲುಗಳನ್ನು ಎದುರಿಸುತ್ತಾರೆ. ವಿಶ್ವವಿದ್ಯಾಲಯ ಮಟ್ಟದ ಪರೀಕ್ಷೆಗಳನ್ನು ಬರೆಯಲು ಬೇಕಾದ ತಯಾರಿ ಮಾಡಿಕೊಳ್ಳುವ ಒತ್ತಡ ಒಂದೆಡೆಯಾದರೆ, ಮನೆಯಲ್ಲಿ ಮಗುವಿನ ಲಾಲನೆ ಪಾಲನೆಯ ಒತ್ತಡ ಮತ್ತೊಂದೆಡೆ. ಇವೆರಡನ್ನೂ ನಿಭಾಯಿಸುವ ಸಂದರ್ಭದಲ್ಲಿ ಅವರು ಇನ್ನೂ ಒಂದು ಮಾತನ್ನು ಕೇಳಿಸಿಕೊಂಡು ಮೌನವಾಗಿರಬೇಕಾಗುತ್ತದೆ: ಅದೆಂದರೆ, ‘ಮದುವೆಯಾಗಿ ಒಂದು ಮಗುವಾಯಿತು, ಪುಟಾಣಿ ಮಗುವನ್ನು ಮನೆಯಲ್ಲಿ ಬಿಟ್ಟು ಇನ್ನೂ ಏನು ಪರೀಕ್ಷೆ ಓದು ಅಂತ ಓಡಾಡಬೇಕು’ ಎಂದು ಹಗುರವಾಗಿ ಮಾತನಾಡುವವರು ಅನೇಕರು. ಇಂಥ ಮಾತುಗಳಿಗೆ ಉತ್ತರಿಸುತ್ತ ಕುಳಿತುಕೊಳ್ಳುವ ಪುರುಸೊತ್ತು ಅವರಿಗೆ ಇರುವುದಿಲ್ಲವೆನ್ನಿ.

ಸಮಯ ಹೊಂದಾಣಿಕೆಯ ಒತ್ತಡವನ್ನು ಅವರು ಅನಿವಾರ್ಯವಾಗಿ ನಿಭಾಯಿಸಬೇಕಾಗುತ್ತದೆ. ಅಪ್ಪನಾದವನು ಓದುವಾಗ, ಕುಟುಂಬದಲ್ಲಿ ಸಹಜವಾಗಿ ಎಲ್ಲ ರೀತಿಯ ಬೆಂಬಲವೂ ದೊರೆಯುತ್ತದೆ. ಆದರೆ ಅಮ್ಮನಾದವಳು ಓದುವಾಗ ಅಂತಹ ಸಮಗ್ರ ಬೆಂಬಲ ದೊರೆಯುತ್ತದೆ ಎಂದು ನಿರೀಕ್ಷಿಸುವಂತಿಲ್ಲ. ಆ ಬೆಂಬಲವು, ಆಯಾ ಕುಟುಂಬಗಳ ಸದಸ್ಯರು ಹೊಂದಿರುವ ದೃಷ್ಟಿಕೋನ, ಪರಸ್ಪರ ಬಾಂಧವ್ಯವನ್ನು ಅವಲಂಬಿಸಿರುತ್ತದೆ. ಎಷ್ಟೋ ಸಂದರ್ಭಗಳಲ್ಲಿ ತಾನು ಕುಟುಂಬದ ಜವಾಬ್ದಾರಿಗಳನ್ನು ಸರಿಯಾಗಿ ನಿಭಾಯಿಸುತ್ತಿಲ್ಲ ಎನ್ನುವ ತಪ್ಪಿತಸ್ಥ ಭಾವನೆ ಮನಸ್ಸಿನೊಳಗೆ ನುಸುಳಿ, ‘ಅಮ್ಮ’ನ ಮನಸ್ಸು ಖಿನ್ನವಾಗಿಬಿಡುತ್ತದೆ. ಎಲ್ಲವನ್ನೂ ನಿಭಾಯಿಸಿಕೊಂಡು ಓದಿನ ಕಡೆಗೆ ಹೆಚ್ಚಿನ ಧ್ಯಾನ ನೀಡುವುದನ್ನು ಅವರು ರೂಢಿಸಿಕೊಳ್ಳಬೇಕಾಗುತ್ತದೆ.

ತರಗತಿಯಲ್ಲಿ ಸಹಪಾಠಿಗಳ ಜೊತೆಗೆ ಹೆಚ್ಚಿನ ಸಮಯ ಕಳೆಯಲು, ಕಾಲೇಜಿನ ಸಹಜ ಜೀವನದ ಖುಷಿಯನ್ನು ಅನುಭವಿಸಲು ಹೆಚ್ಚಿನ ಅವಕಾಶಗಳು ಅವರಿಗೆ ದೊರೆಯುವುದಿಲ್ಲ. ತರಗತಿಯು ಮುಗಿದ ತಕ್ಷಣವೇ ಅವರು ‘ಬಿಲ್ಲಿನಿಂದ ಹೊರಟ ಬಾಣದಂತೆ’ ನೇರ ಮನೆಗೆ ಬರುವುದು ಅನಿವಾರ್ಯ. ಕಾಲೇಜಿನ ಇತರ ಚಟುವಟಿಕೆಗಳತ್ತ ಗಮನ ಹರಿಸಲು, ಅವುಗಳಲ್ಲಿ ಭಾಗವಹಿಸಲು ಪೂರಕವಾದ ಮನಸ್ಥಿತಿ ಅವರಲ್ಲಿ ಇರುವುದಿಲ್ಲ.

ಮನೆಯಲ್ಲಿಯೂ ಓದಿಕೊಳ್ಳುವುದಕ್ಕೆ ಬೇಕಾದ ಪೂರಕ ಪರಿಸ್ಥಿತಿ ಯಾವಾಗಲೂ ದೊರೆಯುವುದಿಲ್ಲ. ಇಂಟರ್ನಲ್ ಪರೀಕ್ಷೆಗಳಿದ್ದಾಗ ಎಷ್ಟೋ ಸಂದರ್ಭಗಳಲ್ಲಿ ಅಕ್ಷತಾ, ಚೆನ್ನಾಗಿ ಓದಿಕೊಳ್ಳುವುದು ಸಾಧ್ಯವಾಗಿಲ್ಲ. ಪಾಸ್ ಆಗುವಷ್ಟು ಅಂಕಗಳನ್ನು ಪಡೆದು ಮುಂದುವರೆದಿದ್ದುಂಟು. ಕೆಲವೊಮ್ಮೆ ಅನಿರೀಕ್ಷಿತವಾಗಿ ಮಗುವಿನ ಆರೋಗ್ಯ ಏರುಪೇರಾಗಿ, ಪರೀಕ್ಷೆಗೆ ಹಾಜರಾಗದೆ ಫೇಲ್ ಅನ್ನಿಸಿಕೊಂಡಿದ್ದೂ ಉಂಟು. ಅಂತಹ ಸಂದರ್ಭಗಳಲ್ಲಿ ಎದೆಗುಂದದೆ, ಅಂತಿಮ ಗುರಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಮುಂದುವರೆಯುವುದು ಮುಖ್ಯವಾಗುತ್ತದೆ. ನಿದ್ದೆಯ ಕೊರತೆಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ವೈಯಕ್ತಿಕ ಆರೋಗ್ಯದತ್ತ ಗಮನ ಹರಿಸುವುದು ಕೂಡ ಮುಖ್ಯ.

ಸಂಗಾತಿ ಪದವಿಯೊಂದನ್ನು ಓದುವ ಆಸಕ್ತಿ ವ್ಯಕ್ತಪಡಿಸಿದಾಗ, ಮತ್ತೊಬ್ಬರು ಅವರ ಅಗತ್ಯಗಳ ಪರವಾಗಿ ನಿಲ್ಲಬೇಕಾಗುತ್ತದೆ. ಪರಸ್ಪರ ಪ್ರೀತಿ ಹೆಚ್ಚುವುದಕ್ಕೆ ಇದೊಂದು ಅವಕಾಶವೂ ಹೌದು. ಪರಸ್ಪರರ ಏಳಿಗೆಗೆ ಪ್ರಾಮಾಣಿಕವಾಗಿ ಬೆಂಬಲಿಸುವುದು ಯಶಸ್ವಿ ದಾಂಪತ್ಯದ ಗುಟ್ಟೂ ಹೌದು.

ಮದುವೆಯ ನಂತರದ ಓದು ಒಂದು ರೀತಿಯಲ್ಲಿ ಜವಾಬ್ದಾರಿಯುತವಾದ ಶೈಕ್ಷಣಿಕ ಅವಧಿಯಾಗಿರುತ್ತದೆ. ಅಂತಿಮವಾಗಿ ಅದು ಮನಸ್ಸಿಗೆ ಸಂತೋಷವನ್ನೇ ಕೊಡುತ್ತದೆ ಎಂಬುದನ್ನು ಮರೆಯಬಾರದು.

ಪ್ರತಿಕ್ರಿಯಿಸಿ: feedback@sudha.co.in